## ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ. ನಂ. 23/2023**

| | | | |
|---|---|---|---|
| **ಹೆಸರು** | : | **ಶ್ವೇತಾ** | **ಚಾ.ಸಾ. 10** |
| **ತಂದೆಯ ಹೆಸರು** | : | **ನಾಗಪ್ಪ** | **ಪ್ರಾ.ಸಾ. 5** |
| **ವಯಸ್ಸು** | : | **17 ವರ್ಷ** | **ದಿನಾಂಕಃ 30-06-2025** |
| **ಉದ್ಯೋಗ** | : | **ವಿದ್ಯಾರ್ಥಿನಿ** | |
| **ವಾಸಸ್ಥಳ** | : | **ಗೌಡನ ಹಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಪ್ರಾಸಾ-3 ಮತ್ತು 4 ಹಾಗೂ ಚಾಸಾ-11 ನನಗೆ ಗೊತ್ತಿಲ್ಲ. ಚಾಸಾ-1 ರವರು ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತು. ಮೃತ ಶಾಂತಾಬಾಯಿ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

ನಿಪಿ-5 ರಿಂದ 7 ರ ಭಾವಚಿತ್ರದಲ್ಲಿರುವ ಆಟೋಗೆ ನಾನು ಈ ಮೊದಲು ನೋಡಿಲ್ಲ.

ಈಗ 2 ರಿಂದ 3 ವರ್ಷಗಳ ಹಿಂದೆ ಚಿಂಚೋಳಿಯಿಂದ ಗೌಡನಹಳ್ಳಿ ಗ್ರಾಮಕ್ಕೆ ನಾನು ಹಾಗೂ ಇತರರು ಆಟೋದಲ್ಲಿ ಹೋಗುತ್ತಿದ್ದೇವು. ಆ ದಿನ ಆಟೋವನ್ನು ನ್ಯಾಯಾಲಯದ ಮುಂದೆ ಇರುವ ಆರೋಪಿ ಚಲಾಯಿಸುತ್ತಿದ್ದ. ಚಿಮ್ಮಾಇದಲಾಯಿ ಕ್ರಾಸ್ ಹತ್ತಿರ ಹೋಗುತ್ತಿದ್ದಾಗ ಮುಂದೆಯಿಂದ ಯಾವುದೋ ವಾಹನ ಬಂದ ಕಾರಣ ಆಟೋ ಪಕ್ಕದಲ್ಲಿ ಹೋಗಿ ಬಿದ್ದಿರುತ್ತದೆ. ಅಪಘಾತದ ಕಾರಣ ನನ್ನ ಬೇನ್ನಿಗೆ ಗಾಯವಾಗಿರುತ್ತದೆ. ಉಳಿದ ವ್ಯಕ್ತಿಗಳಿಗೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಮುಂದೆಯಿಂದ ಬಂದ ದ್ವಿಚಕ್ರವಾಹನದ ತಪ್ಪಿನಿಂದ ಕಾರಣ ಅಪಘಾತವಾಗಿರುತ್ತದೆ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆ ದಿನ ಆಟೋದಲ್ಲಿ ನಮ್ಮ ಊರಿನ ಪ್ರಾಸಾ-3 ಮತ್ತು 4 ರವರು ಇದ್ದರು ಎಂದರೆ ಸರಿ. ಸದರಿ ಆಟೋದಲ್ಲಿ ಚಾಸ-11 ಮತ್ತು ನಿಪಿ-8 ರ ಭಾವಚಿತ್ರದಲ್ಲಿರುವ ಮಹಿಳೆ ಹಾಗೂ ಚಾಸಾ-1 ರವರು ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಆಟೋವನ್ನು ಅತಿ ವೇಗ ಹಾಗೂ

ನಿಷ್ಕಾಳಜಿತನದಿಂದ ಚಲಾಯಿಸಿ ಒಮ್ಮೇಲೆ ಬ್ರೇಕ್ ಹಾಕಿದ ಕಾರಣ ಆಟೋ ಪಲ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಆ ದಿನ ಆಟೋದಲ್ಲಿ ಕುಳಿತವರಿಗೆ ಗಾಯವಾಗಿರುತ್ತದೆ ಎಂದರೆ ಸರಿ. ಎಲ್ಲಾ ಗೊತ್ತಿದ್ದರು ಆರೋಪಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು. ಅಪಘಾತ ನಿಪಿ-4 ರ ಭಾವಚಿತ್ರದಲ್ಲಿರುವ ಸ್ಥಳದಲ್ಲಿ ಆಗಿತ್ತು ಎಂದರೆ ಸರಿ.

**ವಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ MSS ವಕೀಲರಿಂದಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**